# ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ

www.rbi.org.in

ಆರ್‌ಬಿಐ/2009-10/142

ಡಿಬಿಓಡಿ.ನಂ.ಎಲ್‌ಇಜಿ.ಬಿಸಿ .37/09.07.005/2009-10 ಸೆಪ್ಟೆಂಬರ 2, 2009

ಎಲ್ಲಾ ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್‌ಗಳು
(ಆರ್‌ಆರ್‌ಬಿಗಳನ್ನು ಹೊರತುಪಡಿಸಿ)

ಮಾನ್ಯರೇ,

**ನ್ಯಾಶನಲ್ ಟ್ರಸ್ಟ್ ಫಾರ್ ವೆಲ್ಫೇರ್ ಆಫ್ ಪರ್ಸನ್ಸ್ ವಿದ್ ಆಸ್ಟಿಸಂ, ಸೆರೆಬ್ರಲ್ ಪಾಲ್ಸಿ, ಮೆಂಟಲ್ ರಿಟಾರ್ಡೇಶನ್ ಆಂಡ್ ಮಲ್ಟಿಪಲ್ ಡಿಸೇಬಿಲಿಟೀಸ್ ಕಾಯ್ದೆ, 1999 ರಡಿಯಲ್ಲಿ ರಚಿಸಲಾದ ಸ್ಥಳೀಯ ಮಟ್ಟದ ಸಮಿತಿಯ ಬಗ್ಗೆ ಮಾಹಿತಿಯನ್ನು ಪ್ರದರ್ಶಿಸುವುದು.**

ಗ್ರಾಹಕ ಸೇವೆಯ ಕುರಿತಾಗಿ ದಯವಿಟ್ಟು ಜುಲೈ 1, 2009ರ ಮಾಸ್ಟರ್ ಸುತ್ತೋಲೆಡಿಬಿಓಡಿ.ನಂ.ಎಲ್‌ಇಜಿ.ಬಿಸಿ.9/09.07.006/2009-10ರ ಪ್ಯಾರಾಗ್ರಾಫ್ 11ನ್ನು ನೋಡಿರಿ. ಇದರಲ್ಲಿ ಸದರಿ ಕಾಯ್ದೆಯಡಿಯಲ್ಲಿ ಒಳಗೊಂಡಿರುವ ಅಂಗವಿಕಲತೆ ಇರುವ ವ್ಯಕ್ತಿಗಳ ಸಲುವಾಗಿ ಬ್ಯಾಂಕ್ ಖಾತೆಗಳನ್ನು ತೆರೆಯುವ/ವ್ಯವಹಾರ ನಡೆಸುವ ಉದ್ದೇಶಗಳಿಗಾಗಿ ಬ್ಯಾಂಕ್‌ಗಳಿಗೆ ಮೆಂಟಲ್ ಹೆಲ್ತ್ ಕಾಯ್ದೆ 1987ರಡಿಯಲ್ಲಿ ಒಂದೋ ಜಿಲ್ಲಾ ಕೋರ್ಟ್‌ನಿಂದ ಅಥವಾ ನ್ಯಾಶನಲ್ ಟ್ರಸ್ಟ್ ಫಾರ್ ದಿ ವೆಲ್ಫೇರ್ ಆಫ್ ಪರ್ಸನ್ಸ್ ವಿದ್ ಆಸ್ಟಿಸಮ್, ಸೆರೆಬ್ರೆಲ್ ಪಾಲ್ಸಿ, ಮೆಂಟಲ್ ರಿಟಾರ್ಡೇಶನ್ ಆಂಡ್ ಮಲ್ಟಿಪಲ್ ಡಿಸೇಬಿಲಿಟಿ ಕಾಯ್ದೆ, 1999ರಡಿಯಲ್ಲಿ (ಇಲ್ಲಿ ಮುಂದೆ ಮೆಂಟಲ್ ಡಿಸೆಬಿಲಿಟ ಕಾಯ್ದೆ ಎಂದು ಕರೆಯಲಾಗುತ್ತದೆ)ಸ್ಥಳೀಯ ಮಟ್ಟದ ಸಮಿತಿಯಿಂದ ನೀಡಲಾದ ಪಾಲಕತನ (ಗಾರ್ಡಿಯನ್‌ಶಿಪ್) ಪ್ರಮಾಣಪತ್ರವನ್ನು ಸ್ವೀಕರಿಸಲು ಸಲಹೆ ನೀಡಲಾಗಿದೆ. ಅಂಗವಿಕಲ ವ್ಯಕ್ತಿಗಳ ಹೆತ್ತವರಿಗೆ/ಸಂಬಂಧಿಕರಿಗೆ ಈ ಕುರಿತು ಯಾವುದೇ ತೊಂದರೆಯಾಗದಂತೆ ಸರಿಯಾದ ಮಾರ್ಗದರ್ಶನವನ್ನು ನೀಡಲಾಗುತ್ತಿದೆ ಎಂದು ತಮ್ಮ ಎಲ್ಲಾ ಶಾಖೆಗಳು ಖಾತ್ರಿ ಮಾಡಿಕೊಳ್ಳಬೇಕೆಂದು ಕೂಡಾ ಬ್ಯಾಂಕ್‌ಗಳಿಗೆ ಸಲಹೆ ನೀಡಲಾಗಿದೆ.

2. ದೆಹಲಿ ಹೈಕೋರ್ಟ್‌ನ ಮುಂದೆ ಬಂದಿರುವ ಮೊಕದ್ದಮೆಯಲ್ಲಿ ಮಾನ್ಯ ಕೋರ್ಟ್ , ಶಾಖೆಗಳಲ್ಲಿ ಪ್ರಮುಖ ಜಾಗದಲ್ಲಿ ಈ ಮುಂದಿನವುಗಳನ್ನು ಪ್ರದರ್ಶಿಸುತ್ತವೆ ಎಂಬುದನ್ನು ಖಾತ್ರಿ ಮಾಡಿಕೊಳ್ಳುವಂತೆ ಬ್ಯಾಂಕ್‌ಗಳಿಗೆ ನಿರ್ದೇಶಿಸಿದೆ (i) ಕಾನೂನಿನಡಿಯಲ್ಲಿ (ಮೆಂಟಲ್ ಡಿಸೆಬಿಲಿಟೀಸ್ ಕಾಯ್ದೆ)ಸೌಲಭ್ಯಗಳ ಆವಶ್ಯಕ ವಿವರಗಳು ; (ii) ಪ್ರಮಾಣ ಪತ್ರವನ್ನು ನೀಡುವ ಉದ್ದೇಶಗಳಿಗಾಗಿ ಪಾರ್ಟಿಗಳು ಸ್ಥಳೀಯ ಸಮಿತಿಗಳನ್ನು ಸಂಪರ್ಕಿಸಬಹುದೆಂಬ ಸಂಗತಿಯನ್ನು ಮತ್ತು ಮೆಂಟಲ್ ಡೆಸೆಬಿಲಿಟೀಸ್ ಕಾಯ್ದೆಯಡಿಯಲ್ಲಿ ನೀಡಲಾದ ಪ್ರಮಾಣ ಪತ್ರವು ಸ್ವೀಕಾರಾರ್ಹವಾಗಿದೆ; ಮತ್ತು (iii) ವಲಯದಲ್ಲಿನ ಸ್ಥಳೀಯ ಮಟ್ಟದ ಸಮಿತಿಗಳ ವಿವರಗಳು ಅಲ್ಲದೆ

ಕೋರ್ಟ್‌ನ ಮಾಹಿತಿಯನ್ನು ಸ್ಥಳೀಯ ಭಾಷೆ ಮತ್ತು ಇಂಗ್ಲಿಷ್/ಹಿಂದಿ (ಅಥವಾ ಎರಡೂ)ಯಲ್ಲಿ ಪ್ರದರ್ಶಿಸಬೇಕೆಂದು ಕೂಡಾ ಆದೇಶಿಸಿದೆ.

3. ಕೋರ್ಟ್‌ನ ಈ ಮೇಲಿನ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಬ್ಯಾಂಕ್‌ಗಳಿಗೆ ಸಲಹೆ ನೀಡಲಾಗುತ್ತಿದೆ. ಮೆಂಟಲ್ ಡಿಸೆಬಿಲಿಟೀಸ್ ಕಾಯ್ದೆಯ ಪ್ರಾವಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ ಎಂದು ಖಾತ್ರಿಮಾಡಿಕೊಳ್ಳಲು ಕೂಡಾ ಬ್ಯಾಂಕ್‌ಗಳಿಗೆ ಸಲಹೆ ನೀಡಲಾಗುತ್ತಿದೆ. ಸ್ಥಳೀಯ ಮಟ್ಟದ ಸಮಿತಿಗಳ ವಿವರಗಳು ನ್ಯಾಶನಲ್ ಟ್ರಸ್ಟ್ ಫಾರ್ ವೆಲ್ಫೇರ್ ಆಫ್ ಪರ್ಸನ್ಸ್ ವಿದ್ ಆಸ್ಟಿಸಂ, ಸೆರೆಬ್ರಲ್ ಪಾಲ್ಸಿ, ಮೆಂಟಲ್ ರಿಟಾರ್ಡೇಶನ್ ಆಂಡ್ ಮಲ್ಟಿಪಲ್ ಡಿಸೆಬಿಲಿಟೀಸ್ ವೆಬ್-ಸೈಟ್‌ನಲ್ಲಿ, ಅಂದರೆ www.thenationaltrust.in ಇಲ್ಲಿ ಉಪಲಬ್ಧವಿದೆ ಎಂಬುದನ್ನು ಗಮನಿಸತಕ್ಕದ್ದು.

ನಿಮ್ಮ ವಿಶ್ವಾಸಿ,
(ಬಿ. ಮಹಾಪಾತ್ರ)